ಮೈಸೂರು ಮಾನಂದವಾಡಿ ರಸ್ತೆಯ ಕಾಮಗಾರಿಗಳು

೨೨೮೭. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ಸಾಲಿನಲ್ಲಿ ಮೈಸೂರು ಮಾನಂದವಾಡಿ ರಸ್ತೆ ಮತ್ತು ಹುಣಸೂರು-ಬೇಗೂರು ರಸ್ತೆಗಳಲ್ಲಿ ಕೈಗೊಂಡಿರುವ ಕೆಲಸಗಳು ಯಾವುವು ? (ವಿವರ ನೀಡುವುದು)

ಆ) ೧೯೮೮-೮೯ನೇ ಸಾಲಿನಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕೆಲಸಗಳಾವುವು ? ಮತ್ತು ಅಂದಾಜು ಹಣವೆಷ್ಟು,

ಇ) ಮೈಸೂರು-ಮಾನಂದವಾಡಿ ರಸ್ತೆಯಲ್ಲಿ ದೊಮ್ಮರಗಳ್ಳಿ ಬಳಿ ಇತ್ತೀಚೆಗೆ ಮುರಿದು ಹೋದ ಸೇತುವೆ ಬದಲಿಗೆ ಹೊಸ ಸೇತುವೆ ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಈ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು, ಅಂದಾಜು ಹಣವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೧೯೮೭-೮೮ನೇ ಸಾಲಿನಲ್ಲಿ ಮೈಸೂರು-ಮಾನಂದವಾಡಿ ರಸ್ತೆ ಮತ್ತು ಹುಣಸೂರು-ಬೇಗೂರು ರಸ್ತೆಯಲ್ಲಿ ಯಾವುದೇ ಕೆಲಸಗಳು ಆಯವ್ಯಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ನೀರಾವರಿ ಅನುದಾನದಲ್ಲಿ ೩.೯೮ ಲಕ್ಷ ರೂ. ಗಳನ್ನು ಮೈಸೂರು-ಮಾನಂದವಾಡಿ ರಸ್ತೆಗೆ ಖರ್ಚು ಮಾಡಲಾಗಿದೆ. ಇದಲ್ಲದೆ ದುರಸ್ತಿ ಮತ್ತು ನಿರ್ವಹಣೆ ಅನುದಾನದಲ್ಲಿ ಮೈಸೂರು-ಮಾನಂದವಾಡಿ ರಸ್ತೆಗೆ ೨.೯೪ ಲಕ್ಷ ರೂ. ಗಳ ವೆಚ್ಚದಲ್ಲಿ ೧೮ ಕಣ್ಣಿ ಕಾಮಗಾರಿಗಳನ್ನು ಹುಣಸೂರು-ಬೇಗೂರು ರಸ್ತೆಯಲ್ಲಿ ಐದು ಸಾವಿರ ರೂ. ಗಳ ವೆಚ್ಚದಲ್ಲಿ ಒಂದು ಕೆಲಸವನ್ನು ತೆಗೆದುಕೊಳ್ಳಲಾಯಿತು.

ಆ) ೧೯೮೮-೮೯ನೇ ಸಾಲಿನಲ್ಲಿ ಮೇಲ್ಕಂಡ ರಸ್ತೆಗಳ ಮೇಲೆ ಯಾವ ಕಾಮಗಾರಿಯನ್ನೂ ಲೋಕೋಪಯೋಗಿ ಇಲಾಖೆಯ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ದುರಸ್ತಿಯ ಅನುದಾನದಲ್ಲಿ ಸಾಧ್ಯವಾದಷ್ಟು ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.
ಆದರೆ ಮೈಸೂರು-ಮಾನಂದವಾಡಿ ರಸ್ತೆಯ ಮೇಲೆ ನೀರಾವರಿ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ತಾಲ್ಲೂಕಿನ ಹೆಸರು	ಕೆಲಸದ ಹೆಸರು	ಅಂದಾಜು ಹಣ
		(ಲಕ್ಷ ರೂ. ಗಳಲ್ಲಿ)
ಹೆಚ್.ಡಿ. ಕೋಟೆ	ಮೈಸೂರು-ಮಾನಂದವಾಡಿ ರಸ್ತೆಗಳು ಪ್ಯಾಟಲಿಂಗ್ ಮತ್ತು ಡಾಂಬರು ಹಾಕುವುದು	೧.೫೨
	೧) ೨೨೪ ಕಿ.ಮೀ. ನಿಂದ ೨೨೪.೬೦ ಕಿ.ಮೀ.	೧.೫೨
	೨) ೨೨೭.೬೦ ಕಿ.ಮೀ. ನಿಂದ ೨೨೮.೦೬ ಕಿ.ಮೀ.	೦.೬೦
	೩) ೨೨೯.೭೦ ಕಿ.ಮೀ. ನಿಂದ ೨೩೧.೪೬ ಕಿ.ಮೀ.	೨.೧೬
	ಒಟ್ಟು	೯.೨೮ ಲಕ್ಷ ರೂ.

ಇ) ಮತ್ತು ಈ) ಮೈಸೂರು-ಮಾನಂದವಾಡಿ ರಸ್ತೆಯಲ್ಲಿ ಹೊಮ್ಮರಗಳ್ಳಿ ಬಳಿ ಒಂದು ಕಬ್ಬಿಣದ ಸೇತುವೆ ಇದೆ. ದಿನಾಂಕ ೧೯-೧೧-೧೯೮೭ರಂದು ಸೇತುವೆಯ ಮೇಲ್ಭಾಗದ ಜಲಾನಯನ ಪ್ರದೇಶದಲ್ಲಿ ವಿಪರೀತ ಮಳೆಬಿದ್ದು ಸೇತುವೆಯ ಪೂರಕ ರಸ್ತೆ ಕೊಚ್ಚಿ ಹೋಗಿತ್ತು. ಆದರೆ ಸೇತುವೆಗೆ ಯಾವ ಜಖಂ

ಆಗಿರಲಿಲ್ಲ. ಕೊಚ್ಚಿಹೋದ ರಸ್ತೆಯ ಭಾಗವನ್ನು ಕೂಡಲೇ ದುರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಯಿತು. ಈ ಸೇತುವೆಯು ಹಳೆಯದಾಗಿದ್ದು ತಿರುವಿನಲ್ಲಿರುವುದರಿಂದ ಈ ಸೇತುವೆಗೆ ಬದಲಾಗಿ ಒಂದು ಹೊಸ ಸೇತುವೆಯನ್ನು ನಿರ್ಮಿಸಲು ಸುಮಾರು ೨೫ ಲಕ್ಷ ರೂ. ಗಳು ಬೇಕಾಗಿದ್ದು ಹಣಕಾಸಿನ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಾಗಿ ಪರಿಶೀಲಿಸಲಾಗುವುದು.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಕಾರ್ಯಾಚರಣೆಯಿಂದ ಕೇಂದ್ರಕ್ಕೆ ಹೋಗಬೇಕಾದರೆ ಈ ಮೈಸೂರು–ಮಾನಂದವಾಡಿ ರಸ್ತೆ ಬಹಳ ಮುಖ್ಯವಾದ ರಸ್ತೆಯಾಗಿದೆ. ೧೯೮೭–೮೮ರಲ್ಲಿ ಈ ರಸ್ತೆಗೆ ಏನೂ ಹಣ ಒದಗಿಸಲಿಲ್ಲ. ೧೯೮೮–೮೯ರ ಆಯವ್ಯಯ ಪಟ್ಟಿಯಲ್ಲಿ ಇದನ್ನು ಸೇರಿಸಿಕೊಂಡು ಹಣ ನೀಡಿದ್ದಾರೆಯೇ ಎಂದರೆ ಅದೂ ಇಲ್ಲ ಎಂದು ಮಾನ್ಯ ಸಚಿವರ ಉತ್ತರದಲ್ಲಿದೆ. ಹೊಮ್ಮರಗಳ್ಳಿ ಹತ್ತಿರ ಇದ್ದ ದೊಡ್ಡ ಸೇತುವೆ ಬಹಳ ಹಳೆಯದಾಗಿ ಸಂಚಾರಕ್ಕೆ ತೊಂದರೆಯಾಗಿದೆ. ಸಾಮಾನ್ಯ ಮಟ್ಟದಲ್ಲಿ ಅದರ ದುರಸ್ತಿ ಕಾರ್ಯವನ್ನು ಮಾಡಿದ್ದಾರೆ. ಇಲ್ಲಿ ಒಂದು ಉತ್ತಮ ಸೇತುವೆ ಆಗ ಬೇಕೆಂದು ಹಿಂದೆ ಇದ್ದಂಥ ಮಾನ್ಯ ಲೋಕೋಪಯೋಗಿ ಸಚಿವರೂ ಮುನಗಂಡಿದ್ದರು. ಈಗ ಅವರ ಉತ್ತರ ನೋಡಿದರೆ ಇದಕ್ಕೆ ಯಾವ ಯಾವ ರೀತಿಯಲ್ಲೂ ಹಣವನ್ನು ಒದಗಿಸಿಕೊಟ್ಟಿಲ್ಲ. ಅಂತರರಾಜ್ಯ ರಸ್ತೆ ಎಂದು ಹೇಳಿದರೆ ಅದು ಇಷ್ಟೇ ಅಡಿ ಆಗಲಿ ಇರಬೇಕು, ಇಷ್ಟೇ ಡಾಂಬರು ಹಾಕಬೇಕೆಂದು ಹೇಳಿದೆ. ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಹಾಗೆ ಬೆಂಗಳೂರು ಮೈಸೂರು ಮಾರ್ಗವಾಗಿ ಮಾನಂದವಾಡಿ ಮಾರ್ಗವಾಗಿ ಹೋಗತಕ್ಕಂಥ ಅದು ಮುಖ್ಯವಾದ ರಸ್ತೆ. ಆದರೆ ಇದು ಲೋಕೋಪಯೋಗಿ ಇಲಾಖೆಯ ಒಂದು ಶೀರ್ಷಿಕೆಯಲ್ಲಿ ಬರುವುದಿಲ್ಲ. ಆದ್ದರಿಂದ ಇದುವರೆವಿಗೂ ಯಾವುದೇ ಒಂದು ನಿರ್ಧಾರವನ್ನು ಸಹ ಮಾಡಿಲ್ಲ. ಕೆಲವು ಭಾಗ ಅಂದರೆ ೧೯–೨೦ ಕಿಲೋಮೀಟರ್ ಉದ್ದ ಮುಳಗಡೆಯಾಗಿರತಕ್ಕಂಥ ಪ್ರದೇಶದ ರಸ್ತೆಗೆ ಬದಲಾಗಿ ಒಂದು ಬದಲಿ ರಸ್ತೆ ನಿರ್ಮಾಣವಾಗುತ್ತದೆ. ಇದು ಸುಮಾರು ೨೫ ಲಕ್ಷ ರೂಪಾಯಿಗಳ ಕೆಲಸ. ಕೆಲವು ಭಾಗದಲ್ಲಿ ಡಾಮರ್ ಕೆಲಸ ನಡೆಯಬೇಕಾಗಿದೆ ಆ ಬಗ್ಗೆ ಕ್ರಮ ತೆಗೆದುಕೊಂಡು ಟೆಂಡರ್ ಕರೆದು ಆದಷ್ಟು ಬೇಗ ಮಾಡಿಸುತ್ತೇನೆ ಆದು ಮುಖ್ಯ ರಸ್ತೆಯಾಗಿರುವುದರಿಂದ ಮಾಡಲಾಗುವುದು. ನೀರಾವರಿ ಶೀರ್ಷಿಕೆಯಲ್ಲಿ ಡಾಮರ್ ಹಾಕಿಸಬೇಕಾಗುತ್ತದೆ. ಜೊತೆಗೆ ನಾವು ಹಣದ ವ್ಯವಸ್ಥೆಯನ್ನು ಸಹ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಶಿವಣ್ಣ.—ಬಹಳ ಮುಖ್ಯ ರಸ್ತೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ರಸ್ತೆಯ ಅಕ್ಕಪಕ್ಕದಲ್ಲಿ ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲ. ವಾಹನದ ಟೈರುಗಳೆಲ್ಲಾ ಹಾಳಾಗುತ್ತವೆ. ಆದ್ದರಿಂದ ಕೊನೆಪಕ್ಷ ಸೈಡ್‌ಗಳಲ್ಲಿ ಮೆಟಲಿಂಗ್ ಆದರೂ ಹಾಕಿಸಿ ಡಾಮರ್ ಮಾಡಿಸಿ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್ –ಇದನ್ನು ಮುಖ್ಯವಾಗಿ ಕಾಮಗಾರಿ ಆಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದಿರುವುದರಿಂದ ಮತ್ತು ಆಂದಾಜು ಪಟ್ಟಿಯಲ್ಲಿ ಇಲ್ಲದಿರುವುದರಿಂದ ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆಂದು ಪರಿಶೀಲನೆ ಮಾಡೋಣ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ರಸ್ತೆಗಳ ನಿರ್ಮಾಣ.

೨೧೨೬. ಶ್ರೀ ಕ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಸೋಮಾದಡ್ಕ ಕದಿರುದ್ಯಾವರ, ದಿದುಪೆ ಮತ್ತು ಸಾಂಸೆವರೆಗಿನ ರಸ್ತೆ ನಿರ್ಮಾಣ ಮತ್ತು ಸೇತುವೆಗಳ ನಿರ್ಮಾಣ ಮಾಡುವ ಕುರಿತು ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಸರ್ಕಾರವು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದಿರಲು ಕಾರಣವೇನು ?